2015 ಕ.ತೀ.ವ 183

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ಅಣ್ಣಾಸಾಬ್ ಮಲ್ಲಗೌಡ ಬಿರಾದಾರ್ –ವಿರುದ್ಧ– ತಿಪ್ಪಣ್ಣ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಎದುರುದಾರರು ಮೇಲ್ಮನವಿದಾರರ ವಿರುದ್ಧ ಘೋಷಣಾ ಆದೇಶವನ್ನು ಕೋರಿ ಅಧಿವಿಚಾರಣಾ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ಭಾಗಶಃ ಪುರಸ್ಕರಿಸಿ ಎದುರುದಾರರಿಗೆ ದಾವಾ ಜಮೀನಿನ ಮೇಲೆ ಕಾಲುದಾರಿಯು ಮಾತ್ರವಿದ್ದು ಗಾಡಿಯನ್ನು ಚಲಿಸುವ ದಾರಿಯಿಲ್ಲವೆಂದು ತೀರ್ಪು ಮತ್ತು ಡಿಕ್ರಿಯನ್ನು ಹೊರಡಿಸುತ್ತದೆ. ಎದುರುದಾರರು ಆ ತೀರ್ಪು ಹಾಗೂ ಡಿಕ್ರಿಯನ್ನು ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಮೇಲ್ಮನವಿಯು ಪುರಸ್ಕೃತಗೊಳ್ಳುತ್ತದೆ. ಮೊದಲನೇ ಮೇಲ್ಮನವಿ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ದಾವಾ ಜಮೀನಿನಲ್ಲಿ ಕಾಲುದಾರಿ ಇತ್ತೆ ಅಥವಾ ಗಾಡಿಯನ್ನು ಚಲಿಸುವ ದಾರಿಯಿತ್ತೆ ಎಂಬ ಅಂಶವನ್ನು ಒಬ್ಬ ನ್ಯಾಯಾಲಯ ಆಯುಕ್ತ (Court Commissioner)ರನ್ನು ನೇಮಿಸಿದಾಗ ಸ್ಪಷ್ಟವಾಗುತ್ತದೆಂದು, ಆ ವರದಿಯು ನ್ಯಾಯಾಲಯವು ಸರಿಯಾದ ತೀರ್ಮಾನಕ್ಕೆ ಬರಲು ಅನುಕೂಲವಾಗುತ್ತದೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಮೊದಲನೇ ಮೇಲ್ಮನವಿ ನ್ಯಾಯಾಲಯಕ್ಕೆ ಹಿಂತಿರುಗಿಸಿ ಸದರಿ ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ.
(ಪ್ಯಾರಾ: 19 ರಿಂದ ಕಡೆಯವರೆಗೆ)

*ನಿಯತ ಎರಡನೇ ಮೇಲ್ಮನವಿ (ಆರ್.ಎಸ್.ಎ) ಸಂ. 1159/2004 (ಡಿಇಸಿ), ದಿನಾಂಕ: 16ನೇ ಏಪ್ರಿಲ್, 2014.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 2012 ಎಸ್‌ಸಿ 2010 ಎ. ಷಣ್ಮುಗಂ –ವಿರುದ್ಧ– ಆರ್ಯ ಕ್ಷತ್ರಿಯ ರಾಜಕುಲ ವಂಶತು ಮದಾಲಯ ನಂದವನ ಪರಿಪಳ್ನೈ ಸಂಗಂ* | *(ಉಲ್ಲೇ) 15* |
| *2. ಐಎಲ್‌ಆರ್ 2010 ಕೆಎಆರ್ 897 ಎನ್. ಸ್ವಾಮಿಗೌಡ –ವಿರುದ್ಧ– ರಾಮೇಗೌಡ ಮತ್ತು ಇತರರು* | *(ಉಲ್ಲೇ) 17* |
| *3. ಜೆಟಿ 2000 (7) ಎಸ್‌ಸಿ 379 ಶ್ರೀಪತ್ –ವಿರುದ್ಧ– ರಾಜೇಂದ್ರ ಪ್ರಸಾದ್ ಮತ್ತು ಇತರರು* | *(ಉಲ್ಲೇ) 18* |

ಅಪೀಲುದಾರರ ಪರ : ಶ್ರೀ ಎಂ.ಬಿ.ನರಗುಂದ್ – ವಕೀಲರು;
ಎದುರುದಾರರ ಪರ : ಶ್ರೀ ಜೆ.ಎಸ್.ಶೆಟ್ಟಿ – ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

1. ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ) ನ್ಯಾಯಾಲಯದ ಕಡತದಲ್ಲಿ ಇತ್ಯರ್ಥದಲ್ಲಿರುವ ಮೂಲದಾವೆ ಸಂಖ್ಯೆ 141/93ರ ಪ್ರತಿವಾದಿಯು ಈ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ. ಇದರಲ್ಲಿನ ಎದುರುದಾರರು ಸದರಿ ದಾವೆಯಲ್ಲಿನ ವಾದಿಗಳಾಗಿದ್ದರು. ವಾದಿಗಳು ಪ್ರತಿವಾದಿಗೆ ಸೇರಿದ ಭೂಮಿಯಲ್ಲಿ, 'ಸಿ.ಡಿ' ಪತ್ರಗಳಲ್ಲಿ ಸೂಚಿಸಿದ ಗಾಡಿದಾರಿಯ ಮುಖಾಂತರ ಹಾದುಹೋಗುವ ಅನುಭೋಗದ ಹಕ್ಕನ್ನು ಪಡೆಯುವ ಮಟ್ಟಿಗೆ ಘೋಷಣಾ ಪರಿಹಾರ ನೀಡಬೇಕೆಂದು ಕೋರಿ ದಾವೆಯನ್ನು ಹೂಡಿದ್ದರು. ಅಲ್ಲಿ ಗಾಡಿದಾರಿಯಿಲ್ಲ, ಆದರೆ ಅಲ್ಲಿರುವುದು ಕೇವಲ ಕಾಲುದಾರಿಯೆಂದು ತೀರ್ಮಾನಿಸಿ ಸದರಿ ದಾವೆಯಲ್ಲಿ ಭಾಗಶಃ ಡಿಕ್ರಿಯನ್ನು ಹೊರಡಿಸಲಾಯಿತು. ದಿನಾಂಕ 09.03.1998ರಂದು ಹೊರಡಿಸಿದ

ಸದರಿ ತೀರ್ಪು ಮತ್ತು ಡಿಕ್ರಿಯನ್ನು, ವಾದಿಗಳು ಜಮಖಂಡಿಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ನಿಯತ ಮೇಲ್ಮನವಿ ಸಂಖ್ಯೆ 36/1998ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಮೇಲ್ಮನವಿಯನ್ನು ಸಲ್ಲಿಸಿ ಪ್ರಶ್ನಿಸಿದ್ದರು. ವಾದಿಗಳು ಹಾಗೆ ಸಲ್ಲಿಸಿದ್ದ ಸದರಿ ಅಪೀಲನ್ನು, 'ಸಿ.ಡಿ' ಪತ್ರಗಳಲ್ಲಿ ಸೂಚಿಸಿದಂತೆ ಎದುರುದಾರರ ಭೂಮಿಯಲ್ಲಿ ಗಾಡಿ ದಾರಿಯಿದೆ ಎಂದು ತೀರ್ಮಾನಿಸಿ, ಪುರಸ್ಕರಿಸಲಾಯಿತು ಮತ್ತು ತದನುಸಾರವಾಗಿ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಮಾರ್ಪಡಿಸಿ, ಅಪೀಲನ್ನು ಅಂಗೀಕರಿಸಲಾಯಿತು. ಮೊದಲ ಅಪೀಲು ನ್ಯಾಯಾಲಯದ ವ್ಯತಿರಿಕ್ತ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ಎದುರುದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಮೇಲ್ಮನವಿ ಸಲ್ಲಿಸುವ ಮೂಲಕ ಈ ನ್ಯಾಯಾಲಯದ ಮುಂದಿದ್ದಾರೆ. ಹಲವಾರು ಕಾನೂನು ಪ್ರಶ್ನೆಗಳನ್ನು ಪ್ರಸ್ತಾಪಿಸುವುದರ ಜೊತೆಗೆ ಹಲವಾರು ಕಾರಣಗಳನ್ನು ಮುಂದಿಡಲಾಗಿದೆ. ಮೂಲದಾವೆ ಸಂಖ್ಯೆ 141/93ರಲ್ಲಿ ದಾವೆಯನ್ನು ಹೂಡುವುದಕ್ಕೆ ಕಾರಣವಾದ ಸಂಗತಿಗಳು ಈ ಮುಂದಿನಂತಿವೆ :

2. ವಾದಿಗಳು ಮತ್ತು ಎದುರುದಾರರ ಜಮೀನುಗಳು ಅಕ್ಕಪಕ್ಕದಲ್ಲಿವೆ. ವಾದಪತ್ರಕ್ಕೆ ಗಾಡಿ ದಾರಿಯಿರುವುದನ್ನು ತೋರಿಸುವ ಸ್ಥೂಲ ನಕ್ಷೆಯೊಂದನ್ನು ಲಗತ್ತಿಸಲಾಗಿದೆ. ವಾದಿಗಳು 15ನೇ ಸರ್ವೆ ನಂಬರಿನ ವಿವಿಧ ಉಪ–ಸರ್ವೆ ನಂಬರುಗಳಲ್ಲಿ ಐದು ತುಂಡು ಜಮೀನುಗಳನ್ನು ಹೊಂದಿದ್ದು, ಆ ಎಲ್ಲಾ 5 ತುಂಡು ಭೂಮಿಗಳೂ ಪೂರ್ವದಿಂದ ಪಶ್ಚಿಮಕ್ಕೆ ಇದ್ದು, ಅವುಗಳನ್ನು 'ಐಎಫ್‌ಹೆಚ್‌ಜಿ' ಪತ್ರಗಳಲ್ಲಿ ತೋರಿಸಲಾಗಿದೆ. ಎದುರುದಾರರ ಭೂಮಿಯು ವಾದಿಗಳ ಭೂಮಿಯ ಉತ್ತರ ಭಾಗಕ್ಕಿದ್ದು, ಅದು 15/6ನೇ ಸರ್ವೆ ನಂಬರಿನಲ್ಲಿದೆ. 'ಬಿಸಿಇಡಿ' ಪತ್ರಗಳಲ್ಲಿ ತೋರಿಸಿದ 15/1 ಸರ್ವೆ ನಂಬರನ್ನುಳ್ಳ ತುಂಡುಭೂಮಿಯು ವಾದಿಗಳ ಭೂಮಿಯ ಈಶಾನ್ಯ ದಿಕ್ಕಿನಲ್ಲಿದೆ. ಸದರಿ ತುಂಡು ಭೂಮಿಯು ಉತ್ತರದಿಂದ ದಕ್ಷಿಣ ದಿಕ್ಕಿಗಿದೆ. ವಾದಿಗಳ ಪ್ರಕಾರ ಗಾಡಿ ದಾರಿಯಿರುವುದು ಈ 15/1 ಸರ್ವೆ ನಂಬರುಳ್ಳ ಭೂಮಿಯ ಸರಹದ್ದಿನಲ್ಲಿಯೇ ಇದೆ ಮತ್ತು ಅದು

ದಕ್ಷಿಣ–ಉತ್ತರ ಅಭಿಮುಖವಾಗಿದೆ. ವಾದಿಗಳ ಜಮೀನಿಗೆ ಪ್ರವೇಶಿಸಲು ಇದೊಂದೇ ಮಾರ್ಗವಾಗಿರುವುದರಿಂದ, ಅವರು 20 ವರ್ಷಗಳಿಗಿಂತಲೂ ಹಿಂದಿನಿಂದ ಅದನ್ನು ಬಳಕೆ ಮಾಡುತ್ತಿದ್ದರೆಂದು ಹೇಳಲಾಗಿದೆ. ಎದುರುದಾರರು ಈ ತುಂಡುಭೂಮಿಯ ಬಳಕೆಯ ಮೇಲೆ ಮಧ್ಯಪ್ರವೇಶಿಸಿ ತಡೆಯುಂಟು ಮಾಡಿದಾಗ, ವಾದಿಗಳು ತಮ್ಮ ತುಂಡು ಭೂಮಿಗಳಿಗೆ ತಲುಪಲು 'ಸಿಡಿ' ಗಾಡಿದಾರಿಯ ಮುಖಾಂತರ ಹಾದುಹೋಗುವ ಹಕ್ಕನ್ನು ತಾವು ಹೊಂದಿದ್ದೇವೆಂದು ಘೋಷಣೆಯನ್ನು ಮಾಡುವಂತೆ ಕೋರಿ ಮತ್ತು ತತ್ಪರಿಣಾಮವಾದ ಖಾಯಂ ಪ್ರತಿಬಂಧಕಾಜ್ಞೆಯ ಪರಿಹಾರ ನೀಡುವಂತೆ ಕೋರಿ ದಾವೆಯನ್ನು ಹೂಡುವ ಅಗತ್ಯವುಂಟಾಯಿತು.

3. ಎದುರುದಾರರ ಭೂಮಿಯ ಪೂರ್ವಭಾಗದಲ್ಲಿ ಗಾಡಿ ದಾರಿಯಿರುವುದಕ್ಕೆ ಸಂಬಂಧಿಸಿದಂತೆ ಮತ್ತು ಅದನ್ನು ತುಂಬಾ ಹಿಂದಿನಿಂದಲೂ ವಾದಿಗಳು ಬಳಕೆ ಮಾಡುತ್ತಿದ್ದರು ಎಂಬುದಕ್ಕೆ ಸಂಬಂಧಿಸಿದಂತೆ ಮುಖ್ಯವಾದ ಎಲ್ಲಾ ಸಮರ್ಥನೆಗಳನ್ನು ನಿರಾಕರಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಮೂಲಕ ಸದರಿ ದಾವೆಗೆ ಪ್ರತಿರೋಧವನ್ನು ಸೂಚಿಸಲಾಯಿತು. ವಾದಿಗಳು ಸ್ಥಳೀಯ ಮಟ್ಟದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಾಗಿದ್ದು, ಅವರು ತಮ್ಮ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಹೊರಿಸಲು ಪ್ರಯತ್ನಿಸುತ್ತಿದ್ದಾರೆಂದು ಹೇಳಲಾಗಿದೆ. ವಾದಿಗಳ ಪ್ರಕಾರವೇ, ವಾದಿಗಳ ಜಮೀನುಗಳ ಪೂರ್ವ ಮತ್ತು ಪಶ್ಚಿಮಕ್ಕೆ ಅವರ ಜಮೀನುಗಳ ಕೆಲವೇ ಗಜಗಳ ಅಳತೆಯ ದೂರದಲ್ಲಿ ಇತರ ದಾರಿಗಳೂ ಇದ್ದು, ಅವರು ಅವುಗಳನ್ನು ತುಂಬಾ ಹಿಂದಿನಿಂದಲೂ ಬಳಕೆ ಮಾಡುತ್ತಲೇ ಇದ್ದಾರೆ ಮತ್ತು ಆ ದಾರಿಯಲ್ಲಿ ಬಸ್‌ಗಳು ಹಾಗೂ ಟ್ಯಾಕ್ಸಿಗಳೂ ಕೂಡಾ ಓಡಾಡುತ್ತಿದ್ದು, ಅವು ಡಾಂಬರು ರಸ್ತೆಗಳಾಗಿವೆ. ಎದುರುದಾರರಿಗೆ ತಮ್ಮ ಸ್ವತ್ತನ್ನು ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕೂ ಇದೆ ಎಂದು ಹೇಳಲಾಗಿದೆ. ಹಾಗಾಗಿ ಅವರು ದಾವೆಯನ್ನು ವಜಾಗೊಳಿಸುವಂತೆ ಪ್ರಾರ್ಥಿಸಿದ್ದಾರೆ.

4. ಮೇಲ್ಕಂಡ ವಾದಗಳ ಆಧಾರದ ಮೇಲೆ ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಲಾಯಿತು :

1) ವಾದಿಯು ವಾದಪತ್ರದ ಕೈಬರಹದ ನಕ್ಷೆಯ ಸರಿತನವನ್ನು ರುಜುವಾತುಪಡಿಸಿದ್ದಾನೆಯೇ?

2) ವಾದಿಗಳು, ತಾವು ಅನಾದಿ ಕಾಲದಿಂದಲೂ 'ಸಿಡಿ' ಗಾಡಿ ದಾರಿಯನ್ನು ಬಳಕೆ ಮಾಡುತ್ತಿದ್ದೇವೆಂಬುದನ್ನು ರುಜುವಾತುಪಡಿಸಿರುವರೇ?

3) ವಾದಿಗಳು ತಮಗೆ ಸಂಬಂಧಿಸಿದ ಜಮೀನುಗಳಿಗೆ ತಲುಪಲು 'ಸಿಡಿ' ಯೊಂದೇ ಮಾರ್ಗವೆಂಬುದನ್ನು ರುಜುವಾತುಪಡಿಸಿರುವರೇ?

4) ಎದುರುದಾರರು ಡಬ್ಲ್ಯೂ.ಎಸ್.ನಲ್ಲಿ ವಾದಿಸಿದಂತೆ, ವಾದಿಗಳು ಅವರ ಜಮೀನಿಗೆ ಪರ್ಯಾಯ ಮಾರ್ಗವನ್ನು ಹೊಂದಿದ್ದರು ಎಂಬುದನ್ನು ರುಜುವಾತುಪಡಿಸಿರುವರೇ?

5) ವಾದಿಗಳು ಕೋರಿದ ಡಿಕ್ರಿಗೆ ಹಕ್ಕುಳ್ಳವರಾಗಿರುವರೇ?

6) ಯಾವ ಡಿಕ್ರಿ ಅಥವಾ ಆದೇಶ?

5. ಮೊದಲ ವಾದಿಯನ್ನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಪಡಿಸಲಾಯಿತು ಮತ್ತು ಇನ್ನೂ 2 ಸಾಕ್ಷಿಗಳನ್ನು ವಿಚಾರಣೆ ಮಾಡಲಾಯಿತು. 10 ನಿಶಾನೆಗಳನ್ನು ಗುರುತು ಮಾಡಲಾಯಿತು. ಎದುರುದಾರನನ್ನು ಡಿ.ಡಬ್ಲ್ಯೂ.–1 ಎಂದು ವಿಚಾರಣೆಗೊಳಪಡಿಸಲಾಯಿತು ಹಾಗೂ ಸಿದ್ದನಗೌಡ ಎಂಬವರೊಬ್ಬರನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆ ಮಾಡಲಾಯಿತು. ಎದುರುದಾರರ ಪರವಾಗಿ ಯಾವುದೇ ದಸ್ತಾವೇಜುಗಳನ್ನು ಗುರುತು ಮಾಡಲಿಲ್ಲ. ಅಂತಿಮವಾಗಿ, ಎದುರುದಾರರ ಭೂಮಿಯ ಪೂರ್ವ ಭಾಗದಲ್ಲಿ ಕೇವಲ ಕಾಲುದಾರಿ ಮಾತ್ರವೇ ಇದೆಯೆಂದು ನಿರ್ಣಯಿಸಿ, ವಿವಾದಾಂಶ ಸಂ.1 ಅನ್ನು ಭಾಗಶಃ ಹೌದೆಂದು ತೀರ್ಮಾನಿಸಲಾಯಿತು. ವಿವಾದಾಂಶ ಸಂ.2 ಮತ್ತು 3ನ್ನು ಹೌದೆಂದು ನಿರ್ಣಯಿಸಲಾಯಿತು. ವಿವಾದಾಂಶ ಸಂ.4 ಅನ್ನು ಇಲ್ಲವೆಂದು ತೀರ್ಮಾನಿಸಲಾಯಿತು. ಕೊನೆಗೆ, ದಾವೆಯನ್ನು, ಗಾಡಿದಾರಿಯ ಹೊರತಾಗಿ ಕಾಲುದಾರಿಗೆ ಸಂಬಂಧಿಸಿದಂತೆ ಮಾತ್ರವೇ ಅನುಭೋಗದ ಹಕ್ಕನ್ನು ಮಂಜೂರು ಮಾಡಲು ಡಿಕ್ರಿ ಮಾಡಲಾಯಿತು.

6. ಸದರಿ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮೊದಲ ಅಪೀಲು ನ್ಯಾಯಾಲಯದ ಮುಂದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಹಲವು ಕಾರಣಗಳನ್ನು ಎತ್ತಿ ಮೇಲ್ಮನವಿ ಸಲ್ಲಿಸಲಾಯಿತು. ಪಕ್ಷಕಾರರ ಪರ ಹಾಜರಾದ ಪ್ರಾಜ್ಞ ವಕೀಲರಿಂದ ವಾದಗಳನ್ನು ಆಲಿಸಿದ ಮೇಲೆ, ತೀರ್ಪಿನ 6ನೇ ಪುಟದಲ್ಲಿ ಕಂಡುಬಂದಂತೆ ಪರಿಗಣನೆಗಾಗಿ ಈ ಕೆಳಕಂಡ ಅಂಶಗಳನ್ನು ರೂಪಿಸುವ ಆಯ್ಕೆ ಮಾಡಿಕೊಳ್ಳಲಾಗಿದೆ :

1. ವಾದಪತ್ರಕ್ಕೆ ಲಗತ್ತಿಸಿದ ಕೈಬರಹದ ನಕ್ಷೆಯಲ್ಲಿ ತೋರಿಸಿದ ಪ್ರಶ್ನಿತ ‘ಸಿಡಿ’ ದಾರಿಯು ಅನಾದಿ ಕಾಲದಿಂದಲೂ ಇರುವ ಗಾಡಿ ದಾರಿಯಾಗಿದೆ ಮತ್ತು ಅದನ್ನು ತಾವು ಮತ್ತು ತಮ್ಮ ಪೂರ್ವಜರು ಕುರುಗೋಡು ಗ್ರಾಮದ ಅದೇ ಸರ್ವೆ ನಂಬರಿನ ಎಂದರೆ, 1 ಮತ್ತು 15/2 ಸರ್ವೆ ನಂಬರಿನಲ್ಲಿರುವ ಜಮೀನಿನ ದಕ್ಷಿಣ ಭಾಗದ ಜಮೀನಿಗೆ ತಲುಪುವ ಸಲುವಾಗಿ ಬಳಸುತ್ತಿದ್ದೆವು ಹಾಗೂ ಆಪಾದಿಸಿದಂತೆ ತಾವು ಅದರ ಮೇಲೆ ಅಗತ್ಯ ಅನುಭೋಗದ ಹಕ್ಕನ್ನು ಹೊಂದಿದ್ದೇವೆ ಎಂಬುದನ್ನು ಅಧಿವಿಚಾರಣಾ ನ್ಯಾಯಾಲಯುದಲ್ಲಿ ವಾದಿಗಳಾಗಿದ್ದ ಈ ಮೇಲ್ಮನವಿದಾರರು ರುಜುವಾತುಪಡಿಸಿದ್ದಾರೆಯೇ?

2. ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು, ‘ಸಿಡಿ’ ದಾರಿಯು ಕಾಲುದಾರಿ ಮಾತ್ರವಾಗಿದೆಯೇ ಹೊರತು ಗಾಡಿ ದಾರಿಯಲ್ಲ ಎಂಬುದರ ನಿರ್ಣಯಕ್ಕೆ ಬರುವಲ್ಲಿ ಮೊಕದ್ದಮೆಯ ವಾಸ್ತವ ಸಂಗತಿಗಳು ಮತ್ತು ಸಂದರ್ಭಗಳ ಕಡೆಗಿನ ಅದರ ದೃಷ್ಟಿ ಮತ್ತು ಅದಕ್ಕೆ ತಕ್ಕಂತೆ ಘೋಷಣೆ ಹೊರಡಿಸುವುದಕ್ಕಾಗಿ ಡಿಕ್ರಿಯನ್ನು ನೀಡಿರುವುದು – ಇವು ತಪ್ಪಾಗಿವೆಯೇ, ಕಾನೂನುಬಾಹಿರವೇ, ವ್ಯತಿರಿಕ್ತವೇ, ಮನಸೋ ಇಚ್ಛೆಯೇ ಮತ್ತು ಕಾನೂನಿನ ಮೂಲ ತತ್ವಗಳಿಗೆ ವಿರುದ್ಧವಾಗಿವೆಯೇ, ಹಾಗಾಗಿ

ಅವು ಸಮರ್ಥನೀಯವಲ್ಲವೇ ಮತ್ತು ಅಧಿವಿಚಾರಣಾ ನ್ಯಾಯಾಲಯದ ಮುಂದೆ ವಾದಿಗಳು ತಮ್ಮ ದಾವೆಯಲ್ಲಿ ಪ್ರಾರ್ಥಿಸಿದಂತೆ, ಘೋಷಣಾ ಪರಿಹಾರ ನೀಡುವುದಕ್ಕೆ ಈ ಮೇಲ್ಮನವಿಯಲ್ಲಿ ಮಧ್ಯೆಪ್ರವೇಶಿಸುವ ಮೂಲಕ ರದ್ದುಪಡಿಸುವುದಕ್ಕೆ ಅವು ಗುರಿಯಾಗಿವೆಯೇ?

3. ಮುಂದಿನ ಆದೇಶವೇನು?

7. ಅಂತಿಮವಾಗಿ, ವಿವಾದಾಂಶ ಸಂ.1 ಮತ್ತು 2ಕ್ಕೆ ಹೌದು ಎಂದು ಉತ್ತರಿಸಲಾಗಿದೆ ಮತ್ತು ಮೇಲ್ಮನವಿಯನ್ನು ಇಡಿಯಾಗಿ ಪುರಸ್ಕರಿಸಲಾಗಿದೆ ಹಾಗೂ 'ಸಿಡಿ' ಪತ್ರಗಳಲ್ಲಿ ಕಂಡುಬಂದ ಗಾಡಿದಾರಿಗೆ ಸಂಬಂಧಿಸಿದಂತೆ ಸ್ವಾಮ್ಯದ ಘೋಷಣಾ ಪರಿಹಾರ ನೀಡುವ ಮೂಲಕ ಮತ್ತು ಖಾಯಂ ಪ್ರತಿಬಂಧಕಾಜ್ಞೆ ನೀಡುವ ಮೂಲಕ ಅದಕ್ಕಾಗಿ ಪ್ರಾರ್ಥಿಸಿರುವಂತೆ ದಾವೆಯನ್ನು ಡಿಕ್ರಿ ಮಾಡಲಾಗಿದೆ. ಈ ವ್ಯತಿರಿಕ್ತ ತೀರ್ಪು ಮತ್ತು ಡಿಕ್ರಿಯನ್ನೇ ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಪ್ರಸ್ತುತ ಮೇಲ್ಮನವಿಯಲ್ಲಿ ಪ್ರಶ್ನಿಸಲಾಗಿದೆ.

8. ಮೇಲ್ಮನವಿದಾರರ ಪರ ವಕೀಲರು, ವಾದಿ ಮತ್ತು ಅವರ ಸಾಕ್ಷಿಗಳ ಸಾಕ್ಷ್ಯವೇ ಗಾಡಿ ದಾರಿಯಿರುವುದಕ್ಕೆ ಸಂಬಂಧಿಸಿದ ವಾದಿಯ ವಾದವನ್ನು ಹೊಡೆದು ಹಾಕುತ್ತದೆ ಎಂದು ಭಾವಾವೇಶದಿಂದ ವಾದಿಸಿದರು. ಮುಂದುವರಿದು ವಾದಿಸುತ್ತಾ, ಮೊದಲ ಅಪೀಲು ನ್ಯಾಯಾಲಯವು, ವಾಸ್ತವ ಸಂಗತಿಗಳ ಅಂತಿಮ ನ್ಯಾಯಾಲಯವಾಗಿದ್ದು, ಸಾಕ್ಷಿಯನ್ನು ಸರಿಯಾದ ದೃಷ್ಟಿಯಲ್ಲಿ ಸೂಕ್ತವಾಗಿ ಮರುಮೌಲ್ಯಮಾಪನ ಮಾಡಿಲ್ಲ ಮತ್ತು ನೈಜವಾದ ವ್ಯವಹರಣೆಯ ಸ್ಥಿತಿಗೆ ದೋಷಪೂರ್ಣವಾದ ಅಳತೆಗೋಲನ್ನು ಅಳವಡಿಸಿಕೊಂಡಿದೆ ಎಂದು ವಾದಿಸಿದರು. ಅಧಿವಿಚಾರಣಾ ನ್ಯಾಯಾಲಯದ ಅತ್ಯುತ್ತಮ ಪರ್ಯಾಲೋಚನಾ ತೀರ್ಪನ್ನು ತಲೆಕೆಳಗು ಮಾಡಲು ಮೊದಲ ಅಪೀಲು ನ್ಯಾಯಾಲಯವು ಯಾವುದೇ ಸಮರ್ಥವಾದ

ಹಾಗೂ ಸಮಾಧಾನಕರವಾದ ಕಾರಣಗಳನ್ನು ನೀಡಿಲ್ಲ ಮತ್ತು ಆ ಕಾರಣದಿಂದಾಗಿ ಮೊದಲ ಅಪೀಲು ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯು ಕಾನೂನಾತ್ಮಕವಾಗಿಯಾಗಲಿ ಅಥವಾ ವಾಸ್ತವ ಸಂಗತಿಯ ಮೂಲಕವಾಗಲಿ ಸಮರ್ಥನೀಯವಾಗಿಲ್ಲವೆಂದು ವಾದಿಸಲಾಗಿದೆ.

9. ಅದಕ್ಕೆ ವಿರುದ್ಧವಾಗಿ ಎದುರುದಾರರ ಪರ ವಕೀಲರು ಮೊದಲ ಅಪೀಲು ನ್ಯಾಯಾಲಯದ ತೀರ್ಪನ್ನು ಬೆಂಬಲಿಸಿ ಬಲವಾಗಿ ವಾದಿಸುತ್ತಾ, ವಾದಿಗಳ ಜಮೀನಿಗೆ ತಲುಪಲು ಪರ್ಯಾಯ ಮಾರ್ಗಗಳಿರುವ ಬಗ್ಗೆ ಪ್ರತಿವಾದಿಯು ಪರಿಣಾಮಕಾರಿಯಾಗಿ ರುಜುವಾತುಪಡಿಸಲಾಗಿಲ್ಲವೆಂದು ಹೇಳಿದರು. ವಾದಿಗಳ ಜಮೀನಿಗೆ ತಲುಪಲು ಪರ್ಯಾಯ ಮಾರ್ಗಗಳಿವೆಯೆಂದು ಪ್ರತಿವಾದಿಯು ಕೇವಲ ಲಿಖಿತ ಹೇಳಿಕೆಯ ಮೂಲಕವೇ ವಾದಿಸಿದ್ದು, ಅದಕ್ಕೆ ಸೂಕ್ತ ರುಜುವಾತು ನೀಡಿದ ಹೊರತು ಅದು ಅಪೂರ್ಣವಾಗುತ್ತದೆ. ಮೊದಲ ಅಪೀಲು ನ್ಯಾಯಾಲಯವು ವ್ಯವಹಾರಗಳ ವಾಸ್ತವ ಸ್ಥಿತಿಗೆ ಸರಿಯಾದ ಮಾರ್ಗವನ್ನು ಅಳವಡಿಸಿಕೊಂಡಿದೆ ಮತ್ತು ಮೇಲ್ಮನವಿಯನ್ನು ಪುರಸ್ಕರಿಸುವುದಕ್ಕೆ ಹಾಗೂ ಪ್ರಾರ್ಥಿಸಲಾದಂತೆ ದಾವೆಯನ್ನು ಡಿಕ್ರಿಗೊಳಿಸುವುದಕ್ಕೆ ಮೊಕದ್ದಮೆಯ ಸಮಷ್ಠಿಯನ್ನೂ ಪರಿಗಣನೆಗೆ ತೆಗೆದುಕೊಂಡಿದೆಯೆಂದು ವಾದಿಸಲಾಯಿತು. ಮಾನ್ಯರಾದ ನನ್ನ ಪೂರ್ವಾಧಿಕಾರಿಯು ಈ ಕೆಳಕಂಡ ಮುಖ್ಯ ಕಾನೂನಿನ ಪ್ರಶ್ನೆಯನ್ನು 19.10.2005ರಂದು ರೂಪಿಸಿದ್ದಾರೆ:

> ‘‘ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ವಿಪರ್ಯಯಗೊಳಿಸಿ, ‘ಸಿಡಿ’ ದಾರಿಯು ಗಾಡಿದಾರಿಯೇ ಹೊರತು ಕಾಲುದಾರಿಯಲ್ಲ ಎಂದು ಘೋಷಿಸಿರುವುದಕ್ಕೆ, ಸಂಬಂಧಪಡುವಷ್ಟರ ಮಟ್ಟಿಗೆ ಮೊದಲ ಅಪೀಲು ನ್ಯಾಯಾಲಯದ ನಿರ್ಣಯವು, ಅದು ಕಾಲುದಾರಿ ಮಾತ್ರವಾಗಿದೆಯೆಂಬ ಸಾಕ್ಷಿಯ ಸಾಕ್ಷ್ಯದ ಅಂಗೀಕಾರವನ್ನು ಪರಿಗಣಿಸದಿರುವುದಕ್ಕಾಗಿ, ಅದೂ ಅಲ್ಲದೆ ‘ಸಿಡಿ’ ಕಾಲುದಾರಿಯು ಗಾಡಿದಾರಿಯಲ್ಲ. ಅದು ಕಾಲುದಾರಿಯಾಗಿದೆಯೆಂಬುದಕ್ಕೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಕಾರಣಗಳನ್ನು

ಪರಿಗಣಿಸದಿರುವುದಕ್ಕಾಗಿ ದಾಖಲೆಯಲ್ಲಿರುವ ಸಾಕ್ಷ್ಯಕ್ಕೆ ವಿರುದ್ಧವಾಗಿದ್ದು, ಅದು ತರ್ಕವಿರುದ್ಧವಾದುದು ಮತ್ತು ಸ್ವೇಚ್ಛಾಚಾರದಿಂದ ಕೂಡಿದ್ದಾಗಿದೆಯೇ?''

**ಕಾರಣಗಳು**:

10. ವಾದಿಗಳು ಮುಂದಿಟ್ಟ ವಾದವೇನೆಂದರೆ, ಪ್ರತಿವಾದಿಯ ಜಮೀನಿನ ದಕ್ಷಿಣಕ್ಕೆ ತಮ್ಮ ಜಮೀನುಗಳಿವೆಯೆಂಬುದಾಗಿದೆ. ವಾದಿಗಳು ಸರ್ವೆ ನಂ. 15ರ ವಿವಿಧ ಹಿಸ್ಸಾಗಳಲ್ಲಿ ಐದು ತುಂಡು ಭೂಮಿಗಳನ್ನು ಹೊಂದಿದ್ದಾರೆಂಬುದು ನಿರ್ವಿವಾದವಾಗಿದೆ. ಪ್ರತಿವಾದಿಯು ಸರ್ವೆ ಸಂ. 15/1ರಲ್ಲಿ ಭೂಮಿಯನ್ನು ಹೊಂದಿದ್ದು, ಅದು ವಾದಿಗಳ ಭೂಮಿಯ ಉತ್ತರಕ್ಕಿದೆ. ಸರ್ವೆ ಸಂ. 15/6ರಲ್ಲಿನ ಭೂಮಿಯ ಪಶ್ಚಿಮಕ್ಕೆ ದಕ್ಷಿಣ–ಉತ್ತರ ಅಭಿಮುಖವಾಗಿ ನಾಲ್ಕು ತುಂಡು ಭೂಮಿಗಳಿವೆ. ವಾದಿಗಳ ಪ್ರಕಾರ ಗಾಡಿ ದಾರಿಯಿರುವುದನ್ನು 'ಸಿಡಿ' ಪತ್ರಗಳಲ್ಲಿ ತೋರಿಸಲಾಗಿದೆ. ವಾದಿಗಳ ಪ್ರಕಾರ, ತಮ್ಮ ಭೂಮಿಗೆ ಹೋಗಲು ಇದೊಂದೇ ದಾರಿಯಿದ್ದು, ತಾವು ಕೃಷಿಕರಾಗಿದ್ದು ಅನಾದಿ ಕಾಲದಿಂದಲೂ ಈ ಗಾಡಿ ದಾರಿಯನ್ನೇ ಬಳಸುತ್ತಿದ್ದೇವೆಂದು ಹೇಳಿದ್ದಾರೆ. ಅಧಿವಿಚಾರಣಾ ನ್ಯಾಯಾಲಯವು ವಾದಿಗಳ ಈ ವಾದವನ್ನು ಒಪ್ಪಿಕೊಂಡಿಲ್ಲ. ಅಧಿವಿಚಾರಣಾ ನ್ಯಾಯಾಲಯವು ವಾದಿಗಳು ತಮ್ಮ ಜಮೀನುಗಳಿಗೆ ಹೋಗಲು ಬಳಸುತ್ತಿದ್ದ ಕಾಲು ದಾರಿಯಲ್ಲವೆಂದು ಅಭಿಪ್ರಾಯಪಟ್ಟಿದೆ. ವಾದಿಗಳನ್ನು ಪಿ.ಡಬ್ಲ್ಯೂ.–1 ಆಗಿ ವಿಚಾರಣೆಗೊಳಪಡಿಸಲಾಗಿದೆ. ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ವಿವರಗಳನ್ನೇ ಪುನರುಚ್ಚರಿಸಿದ್ದಾರೆ. ಪ್ರತಿವಾದಿ ಪರ ವಕೀಲರು ಅವರನ್ನು ಸುದೀರ್ಘವಾಗಿ ಪಾಟೀ ಸವಾಲಿಗೊಳಪಡಿಸಿದರು. ಪಾಟೀಸವಾಲಿನಲ್ಲಿ ಅವರು ತಮ್ಮ ಜಮೀನು ಹಾಗೂ ಪ್ರತಿವಾದಿಯ ಜಮೀನಿನ ನಡುವೆ ಒಂದು ಬದುವಿದ್ದು, ಅದು ಎತ್ತರವಾಗಿದೆಯೆಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಸದರಿ ಬದುವಿನ ಮೇಲೆ ಗಿಡಗಳು ಬೆಳೆದಿವೆ ಮತ್ತು ಆ ಬದುವು ಪೂರ್ವ–ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿದೆ ಹಾಗೂ ಪ್ರತಿವಾದಿಯ ಭೂಮಿಯ ಈಶಾನ್ಯ ದಿಕ್ಕಿಗೆ ಒಂದು ಬಾವಿಯಿದೆ ಎಂಬುದನ್ನೂ ಸಹ ಒಪ್ಪಿಕೊಂಡಿದ್ದಾರೆ. ಅವರು ಮುಂದುವರಿದು, ಸದರಿ ಬದುವು, ಆ ಬಾವಿಗೆ

ಹೊಂದಿಕೊಂಡಿದ್ದು ಅದು ದಕ್ಷಿಣ–ಉತ್ತರ ದಿಕ್ಕಿಗಿದೆ ಎಂಬುದನ್ನು ಸಹ ಒಪ್ಪಿಕೊಂಡಿದ್ದಾರೆ. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ನಿಜವಾಗಿಯೂ ಗಾಡಿದಾರಿ ಅಸ್ತಿತ್ವದಲ್ಲಿದ್ದರೆ, ಅಲ್ಲಿ ಯಾವುದೇ ಬದುವು ಇರಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಅದರ ಮೇಲೆ ಯಾವುದೇ ಗಿಡಗಳು ಇರಲು ಸಾಧ್ಯವಿರುತ್ತಿರಲಿಲ್ಲವೆಂಬ ಅಭಿಪ್ರಾಯಕ್ಕೆ ಬರಲು ಇದನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ.

11. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಪ್ರಸ್ತುತ ಮೊಕದ್ದಮೆಯಲ್ಲಿ ಎರಡನೇ ವಾದಿಯಾಗಿರುವ ಡಿ.ಡಬ್ಲ್ಯೂ.2– ಮಾರುತಿಯ ಮಾತಿನಲ್ಲಿ ಹೊರಬಂದ ಕೆಲವು ಉಪಯುಕ್ತ ಮಾಹಿತಿಯನ್ನೂ ಸಹ ಅವಲಂಬಿಸಿದ್ದಾರೆ. ಅವನು ತನ್ನ ಪಾಟೀಸವಾಲಿನಲ್ಲಿ ವಾದಿಗಳ ಭೂಮಿಗೆ ಹೋಗಲು ಪ್ರತಿವಾದಿಯ ಜಮೀನಿನ ಮೇಲಿನ ಕಾಲುದಾರಿಯನ್ನು ಬಳಸಲಾಗುತ್ತದೆ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಪ್ರತಿವಾದಿಯ ಜಮೀನಿನ ಪೂರ್ವಭಾಗದಲ್ಲಿ ಉತ್ತರ–ದಕ್ಷಿಣಕ್ಕೆ ಹಾದುಹೋಗುವ ಗಾಡಿದಾರಿಯಿದೆ ಎಂಬ ಬಗ್ಗೆ ಪಿ.ಡಬ್ಲ್ಯೂ.–3 ತನ್ನ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಹೇಳಿದ್ದರೂ ಕೂಡ, ಪಾಟೀ ಸವಾಲಿನ ಕಂಪನವನ್ನು ತಡೆದುಕೊಳ್ಳಲಿಲ್ಲ. ಮತ್ತೊಂದು ಕಡೆ, ಆತನು ನಿರ್ದಿಷ್ಟವಾಗಿ ವಾದಿ ಮತ್ತು ಪ್ರತಿವಾದಿಯ ಜಮೀನಿನ ನಡುವೆ ಇರುವ ಬದುವಿನ ಬಗ್ಗೆ ಮತ್ತು ಅದರಲ್ಲಿ ಒಬ್ಬನೇ ವ್ಯಕ್ತಿ ಹಾದುಹೋಗಲು ಸಾಧ್ಯ ಎಂದು ಮತ್ತು ಆ ಪ್ರಶ್ನಿತ ದಾರಿಯ ಮುಖಾಂತರ ಯಾವುದೇ ಎತ್ತಿನ ಗಾಡಿ ಹಾದುಹೋದದ್ದನ್ನು ತಾನು ಎಂದೂ ನೋಡಿಲ್ಲವೆಂದು ತನ್ನ ಸಾಕ್ಷ್ಯದಲ್ಲಿ ಹೇಳಿಕೆ ನೀಡಿದ್ದಾನೆ. ಆತನು ಮುಂದುವರಿದು, ವಾದಿಗಳ ಜಮೀನಿನ ಪಶ್ಚಿಮಕ್ಕೆ ಬಾಬಾಕರ್ ಮತ್ತು ವಿಭೂತಿಮಠ್ ಎಂಬ ಇಬ್ಬರು ವ್ಯಕ್ತಿಗಳ ಜಮೀನಿದೆ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಅಲ್ಲದೆ, ಬಾಬಾಕರ್ ಮತ್ತು ವಿಭೂತಿಮಠ್ ಎಂಬ ಈ ಇಬ್ಬರೂ ವ್ಯಕ್ತಿಗಳ ಜಮೀನಿಗೆ ಹೊಂದಿಕೊಂಡಂತೆ ಸವಲಿಗಿ ಮುಖ್ಯರಸ್ತೆಯಿದೆ ಎಂದೂ ಸಹ ಒಪ್ಪಿಕೊಂಡಿದ್ದಾನೆ. ಅದೂ ಅಲ್ಲದೆ ಸದರಿ ರಸ್ತೆಯು ವಾದಿಗಳ ಜಮೀನಿಗೆ 200 ಅಡಿ ಅಂತರವಿದೆ ಎಂಬುದನ್ನೂ ಸಹ ಒಪ್ಪಿಕೊಂಡಿದ್ದಾನೆ.

12. ಮತ್ತೊಂದು ಕಡೆ, ಡಿ.ಡಬ್ಲ್ಯೂ. 1 ಗಾಡಿದಾರಿ ಅಥವಾ ಕಾಲು ದಾರಿಯಿರುವುದನ್ನು ಖಡಾಖಂಡಿತವಾಗಿ ನಿರಾಕರಿಸಿದ್ದಾನೆ. ಅಲ್ಲದೆ, ಅವನು ಪಶ್ಚಿಮ ದಿಕ್ಕಿನಲ್ಲಿ ವಾದಿಗಳ ಜಮೀನಿಗೆ ಹೊಂದಿಕೊಂಡಂತೆ ಒಂದು ಸಣ್ಣ ನೀರಿನ ಕಾಲುವೆಯಿದೆ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಡಿ.ಡಬ್ಲ್ಯೂ.2 ಆಗಿ ವಿಚಾರಣೆ ಮಾಡಿದ ಸಿದ್ದನಗೌಡ ಎಂಬುವರು ತಮ್ಮ ಪಾಟೀಸವಾಲಿನಲ್ಲಿ ನಿರ್ದಿಷ್ಟವಾಗಿ ವಾದಿಯ ಜಮೀನಿನ ಪಶ್ಚಿಮಕ್ಕೆ ಒಂದು ಹಳ್ಳವಿದೆ ಮತ್ತು ಸದರಿ ಹಳ್ಳದ ನಂತರ ಬಾಬಾಕರ್ ಮತ್ತು ವಿಭೂತಿಮಠ್ ಅವರ ಜಮೀನಿದೆ ಎಂದು ಸಾಕ್ಷ್ಯ ನುಡಿದಿದ್ದಾರೆ. ಆತನು ತನ್ನ ಸಾಕ್ಷ್ಯದ ಮುಂದುವರಿಕೆಯಾಗಿ ಬಾಬಾಕರ್ ಮತ್ತು ವಿಭೂತಿಮಠ್ ಅವರ ಸದರಿ ಜಮೀನಿನ ಪಶ್ಚಿಮಕ್ಕೆ ಮುಖ್ಯರಸ್ತೆಯಿದೆಯೆಂದು ಮತ್ತು ವಾದಿಗಳು ತಮ್ಮ ಜಮೀನಿಗೆ ಬಾಬಾಕರ್ ಮತ್ತು ವಿಭೂತಿಮಠ್ ಅವರ ಜಮೀನಿನ ಮುಖಾಂತರ ತಮ್ಮ ಗಾಡಿಗಳಲ್ಲಿ ಹೋಗುತ್ತಾರೆಂದು ಹೇಳಿದ್ದಾನೆ. ಅಲ್ಲದೆ, ಬಾಬಾಕರ್ ಮತ್ತು ವಿಭೂತಿಮಠ್ ಅವರು ಇನ್ನೂ ಜೀವಂತವಾಗಿದ್ದಾರೆಂದು ಸಾಕ್ಷ್ಯ ನುಡಿದಿದ್ದಾನೆ. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಇದನ್ನು ಪರಿಗಣಿಸಿ ಅಲ್ಲಿ ಕಾಲುದಾರಿ ಮಾತ್ರವಿದೆಯೇ ಹೊರತು ಗಾಡಿದಾರಿಯಿಲ್ಲವೆಂದು ತೀರ್ಮಾನಿಸಿದ್ದಾರೆ.

13. ಪ್ರತಿವಾದಿಯ ಜಮೀನಿನ ಪೂರ್ವಭಾಗದಲ್ಲಿ ಕಾಲುದಾರಿಯಿದೆ ಎಂಬ ನಿರ್ಣಯವನ್ನು ಪ್ರತಿವಾದಿಯು ವಿರೋಧಿಸಿಲ್ಲ. ಸದರಿ ನಿರ್ಣಯದ ವಿರುದ್ಧ ಅವರಿಗೆ ಅಸಮಾಧಾನವೇನಾದರೂ ಇದ್ದಿದ್ದರೆ, ಪ್ರತಿವಾದಿಯು ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಬೇಕಾಗಿತ್ತು. ಮತ್ತೊಂದೆಡೆ ಮೊದಲ ಅಪೀಲು ನ್ಯಾಯಾಲಯದ ತೀರ್ಪಿನಿಂದ ಅವರು ಬಾಧಿತರಾದ್ದರಿಂದ, ಅವರು ಈ ನ್ಯಾಯಾಲಯದ ಮುಂದೆ ಸಿ.ಪಿ.ಸಿ. (ಸಿವಿಲ್ ಪ್ರಕ್ರಿಯಾ ಸಂಹಿತೆ)ಯ 100ನೇ ಪ್ರಕರಣದಡಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಪ್ರತಿವಾದಿಯ ಜಮೀನಿನ ಪೂರ್ವಭಾಗದಲ್ಲಿ ಗಾಡಿ ದಾರಿಯಿದೆಯೆಂದು ಮತ್ತು ವಾದಿಗಳು ಸರ್ವೇ ನಂ. 1ರಲ್ಲಿನ ಅವರ ಜಮೀನಿಗೆ ಹೋಗಲು ಅದೊಂದೇ ಮಾರ್ಗವಿರುವುದೆಂದು ನಿರ್ಣಯಿಸಿದ್ದಾರೆ. ಅವರು ಎಲ್ಲಾ

ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಸೂಕ್ತ ದೃಷ್ಟಿಕೋನದಲ್ಲಿ ಮರುಮೌಲ್ಯಮಾಪನ ಮಾಡಬೇಕಾಗಿತ್ತು ಮತ್ತು ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನ ಬಗ್ಗೆ ತನಗೆ ಯಾಕೆ ಸಹಮತಿಯಿಲ್ಲ ಎಂಬ ಬಗ್ಗೆ ಅವರು ಸಮರ್ಥವಾದ ಮತ್ತು ಅರ್ಹ ಕಾರಣಗಳನ್ನು ನೀಡಬೇಕಾಗಿತ್ತು. ಮೊದಲ ಅಪೀಲು ನ್ಯಾಯಾಲಯವು ಎರಡು ಬಗೆಯ ಕರ್ತವ್ಯಗಳನ್ನು ಹೊಂದಿರುತ್ತದೆ: (1) ಸಮಗ್ರ ಸಾಕ್ಷ್ಯವನ್ನು ಮರುಮೌಲ್ಯಮಾಪನ ಮಾಡಿ, ಸೂಕ್ತ ತೀರ್ಮಾನಕ್ಕೆ ಬರುವುದು, ಮತ್ತು (2) ಅಧಿವಿಚಾರಣಾ ನ್ಯಾಯಾಲಯವು ಎಲ್ಲಿ ತಪ್ಪು ಮಾಡಿದೆ ಎಂಬುದನ್ನು ಸೂಚಿಸುವುದು. ವಾದಿಗಳ ಜಮೀನಿಗೆ ಹೋಗಲು ದಾರಿಯಾಗಿ ಬಳಸುತ್ತಿರುವ ಪ್ರತಿವಾದಿಯ ಜಮೀನಿನ ಪೂರ್ವಭಾಗದಲ್ಲಿ ಖಾಲಿ ಜಾಗವಿದೆಯೆಂಬ ಕಾರಣ ಮಾತ್ರದಿಂದಲೇ ಸದರಿ ದಾರಿಯು ಗಾಡಿ ದಾರಿಯಾಗಿದೆಯೆಂಬ ನಿರ್ಣಯಕ್ಕೆ ಬರಲಾಗದು. ವಾದಿ ಮತ್ತು ಪ್ರತಿವಾದಿಯ ಜಮೀನಿನ ನಡುವೆ ಬದುವಿರುವುದು ಮತ್ತು ಆ ಬದುವು ಎತ್ತರವಾಗಿರುವುದು ಹಾಗೂ ಅಲ್ಲಿ ಹಲವಾರು ಜಮೀನುಗಳಿರುವುದೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಮತ್ತು ನೆರೆಹೊರೆಯ ಬಾಬಾಕರ್ ಮತ್ತು ವಿಭೂತಿಮಠ್ ಅವರ ಜಮೀನಿನ ಪಶ್ಚಿಮಕ್ಕೆ ಸವಲಿಗಿಗೆ ಹೋಗುವ ಮುಖ್ಯ ರಸ್ತೆಯಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವಾದಿತ ವಿಷಯದ ಬಗ್ಗೆ ಬೆಳಕು ಚೆಲ್ಲಲು ಆಯುಕ್ತರನ್ನು ನೇಮಕ ಮಾಡುವುದಕ್ಕೆ ಅರ್ಜಿ ಸಲ್ಲಿಸಬೇಕೆಂದು ಪಕ್ಷಕಾರರನ್ನು ಮನವೊಲಿಸುವುದು ಮೊದಲ ಅಪೀಲು ನ್ಯಾಯಾಲಯದ ಕರ್ತವ್ಯವಾಗಿತ್ತು. ಪಿ.ಡಬ್ಲ್ಯೂ.1 ರಿಂದ 3ರವರೆಗಿನ ಸಾಕ್ಷಿಗಳ ಹೇಳಿಕೆಯಿಂದ ಹೊರಬಂದಿರುವ ಕೆಲವು ಉಪಯುಕ್ತ ಉತ್ತರಗಳು ನಿಜವಾಗಿಯೂ ಅಂಗೀಕಾರದ ಸ್ವರೂಪದವಾಗಿದ್ದು, ಅವು ಪ್ರತಿವಾದಿಯ ಜಮೀನಿನ ಮುಖಾಂತರ ವಾದಿಯ ಜಮೀನಿಗೆ ಹೋಗಲು ಅವಕಾಶವಿರುವ ಬಗ್ಗೆ ಬೆಳಕು ಚೆಲ್ಲುತ್ತವೆಯೇ ಹೊರತು, ಗಾಡಿ ದಾರಿಯಿರುವ ಬಗ್ಗೆ ಅಲ್ಲ. ನಿಜವಾಗಿಯೂ ಗಾಡಿದಾರಿ ಇದ್ದಿದ್ದರೆ ಮತ್ತು ಅದನ್ನು ಅನಾದಿಕಾಲದಿಂದಲೂ ವಾದಿಗಳು ಬಳಕೆ ಮಾಡುತ್ತಿದ್ದಿದ್ದರೆ ಪ್ರತಿವಾದಿಯ ಜಮೀನಿನ ಮೇಲೆ ಕೆಲವು ಪ್ರಬಲವಾದ ಸಾಕ್ಷ್ಯ ಇದ್ದೇ ಇರುತ್ತಿತ್ತು ಮತ್ತು ಅದನ್ನು ಗಮನಿಸಲು ಸಾಧ್ಯವಿತ್ತು.

14. ವಾದಿಗಳ ಜಮೀನಿಗೆ ಹೋಗಲು ಪರ್ಯಾಯ ಮಾರ್ಗಗಳಿಲ್ಲ ಎಂಬ ಬಗ್ಗೆ ಪ್ರತಿವಾದಿಯು ವಾದವನ್ನೇ ಮಾಡಿಲ್ಲ ಎಂಬ ನಿರ್ಣಯಕ್ಕೆ ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಬಂದಿದ್ದಾರೆ. ಪ್ರತಿವಾದಿಯ ಜಮೀನಿನ ಪೂರ್ವಭಾಗದಲ್ಲಿ ದಕ್ಷಿಣ–ಉತ್ತರ ಅಭಿಮುಖವಾಗಿ ಅ ಜಮೀನಿನ ಸ್ವಲ್ಪ ಭಾಗವನ್ನು ವಾದಿಗಳು ತಮ್ಮ ಜಮೀನಿಗೆ ಹೋಗಲು ಬಳಸಿಕೊಳ್ಳುತ್ತಿದ್ದಾರೆಂದು ಯಾರೇ ಒಪ್ಪಿದರೂ ಕೂಡ, ವಾದಿಯು ಪರಿಣಾಮಕಾರಿಯಾಗಿ ತನ್ನ ಆರಂಭಿಕ ಹೊಣೆಯನ್ನು ನಿಭಾಯಿಸಿದ ಹೊರತು, ಹೊಣೆಯು ಮತ್ತೊಂದು ಪಕ್ಷಕ್ಕೆ ವರ್ಗಾವಣೆಯಾಗುವುದಿಲ್ಲ. ಸದರಿ ಪ್ರವೇಶ ಮಾರ್ಗವು ಗಾಡಿದಾರಿಯೆಂದು ಊಹೆ ಮಾಡಲಾಗದು. ವಾದಿಗಳ ಜಮೀನಿಗೆ ಹೋಗಲು ಪರ್ಯಾಯ ಮಾರ್ಗಗಳು ಯಾವುವಾದರೂ ಇವೆಯೇ ಎಂಬುದನ್ನು ಸುಸ್ಥಾಪಿಸಬೇಕಾಗುತ್ತದೆ. ಅದಿಲ್ಲದಿದ್ದರೂ ಕೂಡ, ವಾದಿಗಳು ತಮ್ಮ ಗಾಡಿಗಳಲ್ಲಿ ತಮ್ಮ ಜಮೀನಿಗೆ ಹೋಗಲು ಬಾಬಾಕರ್ ಮತ್ತು ವಿಭೂತಿಮಠ್ ಅವರ ಜಮೀನನ್ನು ಬಳಕೆ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ತೋರಿಸುವ ಸಾಕ್ಷಿಯನ್ನು ದಾಖಲೆಯಲ್ಲಿ ಮಂಡಿಸಲಾಗಿದೆ. ಪಿ.ಡಬ್ಲ್ಯೂ.2 ಮತ್ತು 3 ಹಾಗೆ ಹೊರಹಾಕಿದ ಮಾಹಿತಿಯನ್ನು ಆಕಸ್ಮಿಕವಾದ ಅಂಗೀಕಾರಗಳೆಂದು ಪರಿಗಣಿಸಲಾಗದು. ಈ ನ್ಯಾಯಾಲಯದ ಪ್ರಕಾರ, ಅವೆಲ್ಲವೂ ಸಾಕ್ಷ್ಯ ಅಧಿನಿಯಮದ 17ನೇ ಪ್ರಕರಣದ ವ್ಯಾಪ್ತಿಯಲ್ಲಿ ಅತ್ಯಂತ ಪ್ರಮುಖವಾದ ಅಂಗೀಕಾರಗಳಾಗಿವೆ. ವಿಷಯದ ಈ ಹಿನ್ನೆಲೆಯಲ್ಲಿ, ಡಿಕ್ರಿಯ ಅಂಗಭಾಗವಾಗಿರುವ ವಾದಪತ್ರಕ್ಕೆ ಅನುಬಂಧಿಸಲಾದ ಕೈಬರಹದ ನಕ್ಷೆಯ 'ಸಿಡಿ' ಪತ್ರಗಳಲ್ಲಿ ತೋರಿಸಿದಂತೆ ಗಾಡಿದಾರಿಯಿದೆ ಎಂಬ ತೀರ್ಮಾನಕ್ಕೆ ಬರಲು ಮೊದಲ ಅಪೀಲು ನ್ಯಾಯಾಲಯವು ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಸರಿಯಾದ ದೃಷ್ಟಿಕೋನದಲ್ಲಿ ಹಾಗೂ ಸೂಕ್ತವಾಗಿ ವಿಶ್ಲೇಷಣೆ ಮಾಡಿಲ್ಲವೆಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು.

15. ಹಾಗೆ ಹೇಳಿದುದರಿಂದಾಗಿ, 'ಸಿಡಿ' ಪತ್ರಗಳಲ್ಲಿ ಸೂಚಿಸಿದ ಗಾಡಿದಾರಿಯು ಇಲ್ಲವೆಂಬ ನಿರ್ಣಯಕ್ಕೆ ಬರಲು ಮೇಲ್ಮನವಿಯನ್ನು ಪುರಸ್ಕರಿಸಲಾಗದು ಮತ್ತು ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲಾಗದು

ಇಲ್ಲಿ *ಎ. ಷಣ್ಮುಗಂ –ವಿರುದ್ಧ– ಆರ್ಯ ಕ್ಷತ್ರಿಯ ರಾಜಕುಲ ವಂಶತು ಮದಾಲಯ ನಂದವನ ಪರಿಪಳ್ಳೈ ಸಂಗಂ* [1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸುವುದು ಉಪಯುಕ್ತವಾಗುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ತೀರ್ಪಿನಲ್ಲಿ ನ್ಯಾಯಿಕ ವ್ಯವಹರಣೆಗಳ ಉದ್ದೇಶದ ಬಗ್ಗೆ ಸ್ಪಷ್ಟವಾಗಿ ಚರ್ಚಿಸಲಾಗಿದೆ. ನ್ಯಾಯಿಕ ವ್ಯವಹರಣೆಗಳನ್ನು ನಡೆಸುವ ಉದ್ದೇಶ ಸತ್ಯವನ್ನು ಗ್ರಹಿಸುವುದಾಗಿದೆ ಮತ್ತು ಪಕ್ಷಕಾರರ ನಡುವೆ ನ್ಯಾಯವನ್ನು ನೀಡುವುದಾಗಿದೆ. ಮೇಲಿನ ತೀರ್ಪಿನ ಪ್ಯಾರಾಗ್ರಾಫ್ ಸಂ. 42 ಮತ್ತು 43ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 30ನೇ ಪ್ರಕರಣದ ಬಗ್ಗೆ ಸುದೀರ್ಘವಾಗಿ ವ್ಯವಹರಿಸಲಾಗಿದ್ದು, ಅವುಗಳು ಇಲ್ಲಿ ಸಂಬಂಧಪಡುವುದರಿಂದ ಅವುಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ :

42. ಸಿವಿಲ್ ಮೊಕದ್ದಮೆಗಳಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 30ನೇ ಪ್ರಕರಣಕ್ಕೆ ಬದ್ಧವಾಗುವುದರಿಂದ ಸತ್ಯವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಆಗಾಗ್ಗೆ ಬಳಸಬೇಕಾದ ಈ ಉಪಬಂಧವನ್ನು ನಮ್ಮ ನ್ಯಾಯಿಕ ಅಧಿಕಾರಿಗಳು ಮತ್ತು ನ್ಯಾಯಾಧೀಶರು ಅಪರೂಪಕ್ಕೊಂಬಂತೆ ಬಳಕೆ ಮಾಡಿಕೊಳ್ಳುವುದು ಕಂಡುಬರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 30ನೇ ಪ್ರಕರಣವು ಈ ಮುಂದಿನಂತಿದೆ :

30. **ಪತ್ತೆ ಹಚ್ಚುವಿಕೆ ಮತ್ತು ಅಂಥಹುದೇ ಇತ್ಯಾದಿಗಳ ಬಗ್ಗೆ ಆದೇಶ ಮಾಡಲು ಅಧಿಕಾರ**:– ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ನ್ಯಾಯಾಲಯವು, ಯಾವುದೇ ಕಾಲದಲ್ಲಿ, ತಾನಾಗಿಯೇ ಅಥವಾ ಯಾವನೇ ಪಕ್ಷಕಾರನ ಅರ್ಜಿಯ ಮೇಲೆ,–

(ಎ) ಪರಿಪ್ರಶ್ನೆಗಳನ್ನು ಒಪ್ಪಿಸಿ, ಉತ್ತರಿಸುವುದಕ್ಕೆ ಸಂಬಂಧಿಸಿದ, ದಸ್ತಾವೇಜಗಳು ಮತ್ತು ವಾಸ್ತವ ಸಂಗತಿಗಳನ್ನು ಅಂಗೀಕರಿಸುವುದಕ್ಕೆ

1. ಎಐಆರ್ 2012 ಎಸ್‌ಸಿ 2010

ಸಂಬಂಧಿಸಿದ ಹಾಗೂ ಸಾಕ್ಷ್ಯವಾಗಿ ಹಾಜರುಪಡಿಸಬಹುದಾದ ದಸ್ತಾವೇಜುಗಳು ಅಥವಾ ಇತರ ಭೌತಿಕ ವಸ್ತುಗಳನ್ನು ಪತ್ತೆಹಚ್ಚುವಿಕೆ, ಪರಿಶೀಲಿಸುವಿಕೆ, ಹಾಜರುಪಡಿಸುವಿಕೆ, ವಶಪಡಿಸಿಕೊಳ್ಳುವಿಕೆ ಮತ್ತು ವಾಪಸ್ ನೀಡುವಿಕೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ಆದೇಶಗಳನ್ನು ಹೊರಡಿಸಬಹುದು;

(ಬಿ) ಸಾಕ್ಷಿ ಹೇಳುವುದಕ್ಕೆ ಅಥವಾ ದಸ್ತಾವೇಜುಗಳನ್ನು ಇಲ್ಲವೆ ಮೇಲೆ ಹೇಳಿದಂತಹ ಇತರ ವಸ್ತುಗಳನ್ನು ಹಾಜರುಪಡಿಸುವುದಕ್ಕೆ ಯಾರ ಹಾಜರಾತಿಯು ಅಗತ್ಯವಿರುವುದೋ ಆ ವ್ಯಕ್ತಿಗಳಿಗೆ ಸಮನುಗಳನ್ನು ಹೊರಡಿಸಬಹುದು;

(ಸಿ) ಯಾವುದೇ ಸಂಗತಿಯನ್ನು ಅಫಿಡವಿಟ್ (ಶಪಥಪತ್ರದ) ಮೂಲಕ ರುಜುವಾತುಪಡಿಸಬೇಕೆಂದು ಆದೇಶಿಸಬಹುದು.

43. "ಸತ್ಯಮೇವ ಜಯತೇ" (ಅಕ್ಷರಶಃ ಸತ್ಯ ಅಜೇಯವಾದುದು) ಪ್ರಾಚೀನ ಗ್ರಂಥವಾದ ಮುಂಡಕ ಉಪನಿಷತ್ತಿನ ಒಂದು ಮಂತ್ರವಾಗಿದೆ. ಭಾರತದ ಸ್ವಾತಂತ್ರ್ಯಾ ನಂತರ, ಇದನ್ನು ಭಾರತದ ರಾಷ್ಟ್ರೀಯ ಧ್ಯೇಯ ವಾಕ್ಯವಾಗಿ ಅಳವಡಿಸಿಕೊಳ್ಳಲಾಗಿದೆ. ಇದನ್ನು ರಾಷ್ಟ್ರೀಯ ಲಾಂಛನದ ತಳಪಾಯದಲ್ಲಿ ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಸಂಪೂರ್ಣ ಮಂತ್ರದ ಅರ್ಥವು ಈ ಕೆಳಕಂಡಂತಿದೆ:

"ಸತ್ಯವೊಂದೇ ಗೆಲ್ಲುತ್ತದೆ; ಅಸತ್ಯ ಗೆಲ್ಲಲಾರದು. ಸತ್ಯದ ಮುಖಾಂತರ ದೈವೀ ಮಾರ್ಗವು ತೆರೆದುಕೊಳ್ಳುತ್ತದೆ, ತಮ್ಮ ಇಚ್ಛೆಗಳನ್ನು ಸಂಪೂರ್ಣವಾಗಿ ಈಡೇರಿಸಿಕೊಳ್ಳುವ ಮಹರ್ಷಿಗಳು ಅದರ ಮೂಲಕ ಪರಮೋಚ್ಛ ಸತ್ಯದ ನಿಧಿಯಿರುವಲ್ಲಿಗೆ ತಲುಪುತ್ತಾರೆ."

16. ಸದರಿ ನಿರ್ಣಯದಲ್ಲಿ ನ್ಯಾಯಿಕ ಸುಧಾರಣೆಗಳ ಕುರಿತಾಗಿ ನ್ಯಾಯಮೂರ್ತಿ ಡಾ: ಮಳೀಮಠ್ ಸಮಿತಿಯು ಸಲ್ಲಿಸಿದ ವರದಿಯ ಮೇಲೆ ಅವಲಂಬನೆಯನ್ನು ಕೂಡ ಇಡಲಾಗಿದೆ. ಸದರಿ ವರದಿಯ ಮೇಲೆ ಭರವಸೆಯನ್ನಿಟ್ಟು, ಎಲ್ಲಾ ನ್ಯಾಯಾಲಯಗಳ ನ್ಯಾಯಾಧೀಶರು ಸಕ್ರಿಯ ಪಾತ್ರವನ್ನು ವಹಿಸುವ ಅಗತ್ಯವಿದೆಯೆಂದು ಮುಂದುವರಿದು ಅಭಿಪ್ರಾಯಪಡಲಾಗಿದೆ.

17. ಈ ಸಂಬಂಧ, ***ಎನ್. ಸ್ವಾಮಿಗೌಡ –ವಿರುದ್ಧ– ರಾಮೇಗೌಡ ಮತ್ತು ಇತರರು***[2], ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪು ಸುಸಂಗತವಾದುದಾಗಿದೆ. ಇದು, ಸ್ಥಳೀಯ ತನಿಖೆ ಮಾಡುವುದಕ್ಕೆ ಕಮೀಷನರ್ ಅವರನ್ನು ನೇಮಕ ಮಾಡುವ ಸಂಬಂಧ ಸಿ.ಪಿ.ಸಿ.ಯ (ಸಿವಿಲ್ ಪ್ರಕ್ರಿಯಾ ಸಂಹಿತೆ)ಯ ಕ್ರಮಾದೇಶ–26 ನಿಯಮ–9ರ ಉಪಬಂಧಗಳ ಬಗ್ಗೆ ಚರ್ಚಿಸುವಾಗ ಮಾಡಿದ ನಿರ್ಣಯವಾಗಿದೆ. ಸದರಿ ನಿರ್ಣಯದ 901ನೇ ಪುಟದಲ್ಲಿ, ಪ್ಯಾರಾ ಸಂ.9ರಲ್ಲಿ ಈ ನ್ಯಾಯಾಲಯವು, ನ್ಯಾಯಾಲಯ ಕಮೀಷನರ್‌ನ ನೇಮಕಕ್ಕೆ ಒಪ್ಪಿಕೊಳ್ಳುವಂತೆ ಪಕ್ಷಕಾರರಿಗೆ ಒತ್ತಾಯವನ್ನು ಕೂಡ ಮಾಡಬಹುದು ಎಂದು ಅಭಿಪ್ರಾಯಪಟ್ಟಿದೆ. ಮುಂದುವರಿದು, ಭೂಪ್ರದೇಶ ಮತ್ತು ಸರಹದ್ದುಗಳಿಗೆ ಸಂಬಂಧಿಸಿದಂತೆ ಗಂಭೀರವಾದ ವಿವಾದವಿದ್ದರೆ, ಆಗ ಕಮೀಷನರ್ ಅನ್ನು ನೇಮಕ ಮಾಡದಿರುವುದು ತೀವ್ರತರವಾದ ನ್ಯಾಯದ ವಿಫಲತೆಗೆ ಕಾರಣವಾಗುತ್ತದೆಂದು ಅಭಿಪ್ರಾಯಪಟ್ಟಿದೆ.

18. ***ಶ್ರೀಪತ್ –ವಿರುದ್ಧ– ರಾಜೇಂದ್ರ ಪ್ರಸಾದ್ ಮತ್ತು ಇತರರು***[3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ವಿವಾದಿತ ಸ್ಥಳವನ್ನು ನಿಶ್ಚಯಿಸುವುದಕ್ಕೆ ಸರ್ವೆ ಕಮೀಷನರ್‌ನ ನೇಮಕವು ಕಾರ್ಯಸಾಧುವಾದುದಾಗಿದ್ದು, ಸರ್ವೆಯರ್‌ನ ನೇಮಕ ಮಾಡದಿರುವುದು ತೀವ್ರತರವಾದ ನ್ಯಾಯದ ವಿಫಲತೆಗೆ ಕಾರಣವಾಗುತ್ತದೆಂದು ಅಭಿಪ್ರಾಯಪಟ್ಟಿದೆ.

---

2. ಐಎಲ್ಆರ್ 2010 ಕೆಎಆರ್ 897

3. ಜೆಟಿ 2000 (7) ಎಸ್‌ಸಿ 379

19. ನ್ಯಾಯಾಲಯವು ತಾನೇ ಸ್ವತಃ ಅಥವಾ ತನ್ನ ಮುಂದೆ ಪಕ್ಷಕಾರರು ಸಲ್ಲಿಸಿದ ಅರ್ಜಿಯ ಮೇಲೆ, ವಿವಾದಿತ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದಕ್ಕೆ ಕಮೀಷನರ್‌ನನ್ನು ನೇಮಕ ಮಾಡಿದ್ದಿದ್ದರೆ, ಅಲ್ಲಿ ಕಾಲುದಾರಿಯಿದೆಯೇ ಅಥವಾ ಗಾಡಿದಾರಿಯಿದೆಯೇ ಎಂಬ ಬಗ್ಗೆ ಸೂಕ್ತ ನಿರ್ಣಯಕ್ಕೆ ಬರಲು ನ್ಯಾಯಾಲಯಕ್ಕೆ ನೆರವಾಗುತ್ತಿತ್ತು. ವಾದಿಗಳ ಜಮೀನಿಗೆ ಹೋಗಲು ಯಾವುದೇ ಮಾರ್ಗ ಇಲ್ಲವೇ ಇಲ್ಲ ಎಂಬುದು ಖಂಡಿತವಾಗಿ ತಿಳಿದುಬಂದರೆ, ನ್ಯಾಯಾಲಯವು ಆ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಅನುಕೂಲಕರ ಸ್ಥಿತಿಯಲ್ಲಿರುತ್ತದೆ. ವಾದಿಗಳು ಅಲ್ಲಿ ಗಾಡಿದಾರಿಯಿದ್ದು, ಅದೊಂದೇ ತಮ್ಮ ಏಕಮಾತ್ರ ದಾರಿಯೆಂದು ಒತ್ತಿ ಹೇಳುತ್ತಿದ್ದಾರೆ. ಪ್ರತಿವಾದಿಯು ತನ್ನ ಜಮೀನಿನ ಮುಖಾಂತರ ವಾದಿಗಳ ಜಮೀನಿಗೆ ಹೋಗಲು ಯಾವುದೇ ದಾರಿಯಿರುವ ಬಗ್ಗೆ ದೃಢವಾಗಿ ನಿರಾಕರಿಸಿದ್ದಾನೆ. ಆದರೆ, ಪ್ರತಿವಾದಿಗೆ ಭಾಗಶಃ ವಿರುದ್ಧವಾದ ತೀರ್ಪನ್ನು ಪ್ರತಿವಾದಿಯು ಪ್ರಶ್ನಿಸಿಲ್ಲ. ಆದ್ದರಿಂದ, ವಾದಿಯ ಜಮೀನಿನಲ್ಲಿ ಪ್ರತಿವಾದಿಗಳ ಜಮೀನಿಗೆ ಹೋಗಲು ದಾರಿಯಿದೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಅದು ಗಾಡಿದಾರಿಯೇ ಅಥವಾ ಕಾಲುದಾರಿಯೇ ಎಂಬುದನ್ನು ವಿವಾದಿತ ವಿಷಯದ ಬಗ್ಗೆ ಸೂಕ್ತವಾಗಿ ಸ್ಪಷ್ಟತೆ ಪಡೆಯುವ ಮೂಲಕ ಕಂಡುಕೊಳ್ಳಬೇಕಾಗುತ್ತದೆ. ಈ ಸಂಬಂಧ, ಸರ್ವೋಚ್ಚ ನ್ಯಾಯಾಲಯವು ***ಎ. ಷಣ್ಮುಗಂ*** ಪ್ರಕರಣದಲ್ಲಿ ನೀಡಿದ ತೀರ್ಪು ಸುಸಂಗತವಾಗಿದ್ದು, ವಿವಾದಿತ ವಿಷಯವನ್ನು ಸ್ಪಷ್ಟವಾಗಿ ಅರಿಯುವ ಹಾಗೆ ಕಮೀಷನರ್‌ರನ್ನು ನೇಮಕ ಮಾಡುವ ಸಂಬಂಧದಲ್ಲಿ ಸ್ವತಃ ತಾನೇ ನೇಮಕ ಮಾಡಲು ಅಥವಾ ಹಾಗೆ ಮಾಡುವುದಕ್ಕೆ ತನ್ನ ಮುಂದಿರುವ ಪಕ್ಷಕಾರರಿಗೆ ಅರ್ಜಿ ಸಲ್ಲಿಸುವಂತೆ ಮನವೊಲಿಸಲು ನ್ಯಾಯಾಲಯಕ್ಕೆ ಯಾವುದೂ ಅಡ್ಡಿಯಾಗುವುದಿಲ್ಲ.

20. ಇಂತಹ ಮೊಕದ್ದಮೆಯಲ್ಲಿ ಕಮೀಷನರ್‌ರನ್ನು ನೇಮಿಸುವುದು ಬಹಳ ವಿಶಿಷ್ಟ ಸ್ವರೂಪದಿಂದ ಆಯಾ ಸ್ಥಳದಲ್ಲಿಯೇ ಸಿಗಬಹುದಾದ ಸಾಕ್ಷಿಯನ್ನು ಪಡೆಯುವ ಪ್ರಯತ್ನವೇ ಹೊರತು ಸಾಕ್ಷಿಯನ್ನು ಸಂಗ್ರಹಿಸುವುದಲ್ಲ. ಮೊದಲ ಅಪೀಲು ನ್ಯಾಯಾಲಯವು ಮೂಲ ದಾವೆಗಳನ್ನು ವ್ಯವಹರಿಸುವ ಸಿವಿಲ್ ನ್ಯಾಯಾಲಯದ

ಸಕಲ ತಂತ್ರಗಳನ್ನು ಹೊಂದಿದ್ದು, ಅದು ಸಿ.ಪಿ.ಸಿ.(ಸಿವಿಲ್ ಪ್ರಕ್ರಿಯಾ ಸಂಹಿತೆ)ಯ ಕ್ರಮಾದೇಶ–26 ನಿಯಮ–9ರ ಅಡಿಯಲ್ಲಿ ಕಮೀಷನರ್‌ರನ್ನು ನೇಮಕ ಮಾಡಬಹುದು ಅಥವಾ ಅದು ಸಿ.ಪಿ.ಸಿ.ಯ ಕ್ರಮಾದೇಶ–6 ನಿಯಮ–12ರ ಅಡಿಯಲ್ಲಿ ವಾದ–ವಿವಾದ ಪತ್ರಗಳ ತಿದ್ದುಪಡಿಗಾಗಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಹುದು ಅಥವಾ ಸಿ.ಪಿ.ಸಿ.(ಸಿವಿಲ್ ಪ್ರಕ್ರಿಯಾ ಸಂಹಿತೆ)ಯ ಕ್ರಮಾದೇಶ 1 ನಿಯಮ 10ರ ಅಡಿಯಲ್ಲಿ ಅಥವಾ ಸಿ.ಪಿ.ಸಿ.ಯ ಕ್ರಮಾದೇಶ 14ರ ಅಡಿಯಲ್ಲಿ ಅಥವಾ ಸಿ.ಪಿ.ಸಿ.(ಸಿವಿಲ್ ಪ್ರಕ್ರಿಯಾ ಸಂಹಿತೆ)ಯ ಕ್ರಮಾದೇಶ–41 ನಿಯಮ–27ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನೂ ಕೂಡ ಪರಿಗಣಿಸಬಹುದು. ಅದೂಅಲ್ಲದೆ, ಪೀಠಾಸೀನ ಅಧಿಕಾರಿಯು ಅತ್ಯಂತ ಹೆಚ್ಚು ಅನುಭವಿ ನ್ಯಾಯಾಧೀಶರಾಗಿದ್ದು, ಅವರನ್ನು ಹೊಂದಿರುವ ಮೊದಲ ಅಪೀಲು ನ್ಯಾಯಾಲಯವು, ಸಕ್ಷಮ ನ್ಯಾಯಾಲಯದ ಕಮೀಷನರ್ ವರದಿಯ ಬೆಳಕಿನಲ್ಲಿ ಮೌಖಿಕ ಮತ್ತು ಇತರ ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವ ಅನುಕೂಲಕರ ಸ್ಥಿತಿಯಲ್ಲಿರುತ್ತದೆ. ಸಕ್ಷಮ ನ್ಯಾಯಾಲಯದ ಕಮೀಷನರ್‌ರ ವರದಿಯು ಸೂಕ್ತ ನಿರ್ಣಯಕ್ಕೆ ಬರುವಲ್ಲಿ ನ್ಯಾಯಾಲಯಕ್ಕೆ ನೆರವಾಗುತ್ತದೆ ಎಂಬುದನ್ನು ಪುನರುಚ್ಚರಿಸುವ ಅಗತ್ಯವಿಲ್ಲ.

21. ವಿಷಯದ ಈ ಹಿನ್ನೆಲೆಯಲ್ಲಿ, ಮೇಲ್ಮನವಿಯನ್ನು ಪುರಸ್ಕರಿಸಬೇಕಾಗುತ್ತದೆ ಮತ್ತು ವರದಿಯನ್ನು ತರಿಸಿಕೊಂಡು, ಆನಂತರ ವಿಷಯವನ್ನು ಆಮೂಲಾಗ್ರವಾಗಿ ತೀರ್ಮಾನಿಸುವ ಸಲುವಾಗಿ, ಕಮೀಷನರ್‌ರನ್ನು ನೇಮಕ ಮಡುವುದಕ್ಕೆ ಅರ್ಜಿ ಸಲ್ಲಿಸಲು ಪಕ್ಷಕಾರರನ್ನು ಒತ್ತಾಯಿಸುವಂತೆ ಅಥವಾ ನ್ಯಾಯಾಲಯವು ತಾನೇ ಸ್ವತಃ ಒಬ್ಬ ಕಮೀಷನರ್‌ನನ್ನು ನೇಮಕ ಮಾಡುವಂತೆ ವಿಷಯವನ್ನು ಮೊದಲ ಅಪೀಲು ನ್ಯಾಯಾಲಯಕ್ಕೆ ಹಿಂದಿರುಗಿಸುವ ಅಗತ್ಯವಿದೆ. ಹಾಗಾಗಿ, 'ಸಿಡಿ' ಗಾಡಿದಾರಿ ಇರುವ ಬಗ್ಗೆ ಮೊದಲು ಅಪೀಲು ನ್ಯಾಯಾಲಯದ ನಿರ್ಣಯವು ವ್ಯತ್ಯಸ್ತವಾದದ್ದು ಮತ್ತು ಮನಸ್ವೇಚ್ಛೆಯಿಂದ ಕೂಡಿದ್ದು ಹಾಗೂ ದಾಖಲೆಯಲ್ಲಿರುವ ಸಾಕ್ಷ್ಯಕ್ಕೆ ವಿರುದ್ಧವಾದುದಾಗಿದೆಯೆಂದು ತೀರ್ಮಾನಿಸಿ, ಮುಖ್ಯ ಕಾನೂನಿನ ಪ್ರಶ್ನೆಗೆ ಹೌದೆಂದು ಉತ್ತರಿಸಬೇಕಾಗಿದೆ. ಆದರೆ, ಅದೊಂದೇ ಕಾರಣ ಮಾತ್ರದಿಂದಲೇ ಮೊದಲ

ಅಪೀಲು ನ್ಯಾಯಾಲಯದ ತೀರ್ಪನ್ನು ರದ್ದುಪಡಿಸಲಾಗದು ಮತ್ತು ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಮರುಸ್ಥಾಪಿಸಲಾಗದು. ಸೂಕ್ತ ಹಾಗೂ ಸಮಗ್ರ ತೀರ್ಮಾನಕ್ಕೆ ಬರಲು ನ್ಯಾಯಾಲಯಕ್ಕೆ ನೆರವಾಗುವ ಸಕ್ಷಮ ನ್ಯಾಯಾಲಯದ ಕಮೀಷನರ್‌ರಿಂದ ವರದಿಯನ್ನು ಪಡೆದ ನಂತರ ಮಾತ್ರವೇ ಒಂದು ವ್ಯಾಪಕ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

## ಆಜ್ಞೆ

ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ ಮತ್ತು ಕಮೀಷನರ್‌ನನ್ನು ನೇಮಕ ಮಾಡಲು ಅರ್ಜಿ ಸಲ್ಲಿಸುವಂತೆ ಪಕ್ಷಕಾರರನ್ನು ಕೋರಲು ಅಥವಾ ನ್ಯಾಯಾಲಯವೇ ಸ್ವತಃ ಕಮೀಷನರ್‌ರನ್ನು ನೇಮಿಸಲು ಮತ್ತು ಕಮೀಷನರ್‌ರಿಂದ ಸಮಗ್ರ ವರದಿಯನ್ನು ತರಿಸಿಕೊಂಡು, ಆ ನಂತರ, ಆಮೂಲಾಗ್ರವಾಗಿ ವಿಷಯವನ್ನು ನಿರ್ಣಯಿಸಲು ಆರ್.ಎ.ಸಂ. 36/95ರಲ್ಲಿ ಅಪೀಲನ್ನು ಮರುಸ್ಥಾಪಿಸುವುದಕ್ಕೆ ಮೊದಲ ಅಪೀಲು ನ್ಯಾಯಾಲಯಕ್ಕೆ ಎಂದರೆ, ಜಮಖಂಡಿಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಪ್ರಕರಣವನ್ನು ಹಿಂದಿರುಗಿಸಲಾಗಿದೆ.

ಪಕ್ಷಕಾರರು 30.06.2014ರಂದು ಮೊದಲ ಅಪೀಲು ನ್ಯಾಯಾಲಯದ ಮುಂದೆ ಹಾಜರಿರತಕ್ಕದ್ದು ಮತ್ತು ಮಾನ್ಯ ನ್ಯಾಯಾಧೀಶರು ಸಾಧ್ಯವಾದಷ್ಟು ಬೇಗನೆ ಎಂದರೆ 20.12.2014ನೇ ದಿನಾಂಕವನ್ನು ಮೀರದಂತೆ ಮೇಲ್ಮನವಿಯನ್ನು ವಿಲೆ ಮಾಡಲು ಅಧಿವಿಚಾರಣೆ ನಡೆಸತಕ್ಕದ್ದು. ಪಕ್ಷಕಾರರು ಮಾನ್ಯ ನ್ಯಾಯಾಧೀಶರಿಗೆ ಸಹಕರಿಸಬೇಕೆಂದು ನಿರ್ದೇಶಿಸಲಾಗಿದೆ.

ಎಲ್ಲಾ ವಾದಗಳಿಗೂ ಮುಕ್ತ ಅವಕಾಶ ನೀಡಲಾಗಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಈಗಾಗಲೇ ಮಂಡಿಸಿದ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವು ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ ಬಾಧಕವಾಗದಂತಿದ್ದು, ಕಮೀಷನರ್‌ರ

ವರದಿಯನ್ನು ಪಡೆದ ನಂತರ ಅದನ್ನು ಮಾನ್ಯ ನ್ಯಾಯಾಧೀಶರು ಮರುವಿಶ್ಲೇಷಣೆ ಮಾಡಬೇಕೆಂದು ಸ್ಪಷ್ಟಪಡಿಸಲಾಗಿದೆ. ಕಮೀಷನರ್‌ರ ವಿಚಾರಣೆಯು ಅವಶ್ಯಕವಾಗಿದ್ದರೆ, ಕಮೀಷನರ್‌ರನ್ನು ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಯಾವುದೇ ಅಡ್ಡಿಯಾಗುವಂತಿಲ್ಲ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.

---